**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.117/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಸೋಮಶೇಖರ್ ಜೆ.ಸಿ. | ಫ್ರಾಸಾ-10 |
| ತಂದೆಯ ಹೆಸರು | : ಚಿಕ್ಕಯ್ಯ | ಚಾಸಾ-27 |
| ವಯಸ್ಸು | : 46 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಐಎಸ್ ಡಿ ಮಂಗಳೂರು | ದಿನಾಂಕಃ12.06.2026. |
| ವಾಸಸ್ಥಳ | : ಮಂಗಳುಊರು ನಗರ. | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾಸ.ಸ.ಅ. ರವರಿಂದ:**

1. ನಾನು ದಿನಾಂಕಃ05.07.2021 ರಿಂದ 05.08.2022 ರವರೆಗೆ ಮೂಡಿಗೆರೆ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಮೂಡಿಗೆರೆ ಪೋಲಿಸ್ ಠಾಣಾ ಮೊಕದ್ದಮೆ ಸಂ.16/2019 ಕ್ಕೆ ಸಂಬಂಧಿಸಿದಂತೆ ದಿ.12.01.2022 ರಂದು ನಾನು ಮೂಡಿಗೆರೆ ವೃತ್ತ ಕಚೇರಿಯಲ್ಲಿ ಬೆರಳು ಮದ್ರಾ ಘಟಕ, ಚಿಕ್ಕಮಗಳೂರು ಇಲ್ಲಿಂದ ಬಂದ ಆಕಸ್ಮಿಕ ಬೆರಳು ಮುದ್ರೆಯ ಪೂರ್ವ ಆರೋಪಿತನ ಬೆರಳು ಮುದ್ರೆ ಹೊಂದಾಣಕೆಯಾದ ಬಗ್ಗೆ ವರದಿಯನ್ನು ಸ್ವೀಕರಿಸಿದ್ದು, ಅದರಲ್ಲಿ ದಿ.08.02.2019 ರಂದು ಘಟನಾ ಸ್ಥಳದಲ್ಲಿ ಗ್ಲಾಸ್ ಡೋರ್ ನ ಮೇಲೆ A ಎಂದು ಗುರುತು ಮಾಡಿರುವ ಒಂದು ಆಕಸ್ಮಿಕ ಬೆರಳು ಮುದ್ರೆ ಬೆಂಗಳೂರು ನಗರದ ಪೋಲಿಸ್ ಠಾಣೆ ಮೊಕದ್ದಮೆ ಸಂ.325/2018 ಕಲಂ.393 IPC ಪ್ರಕರಣದಲ್ಲಿ ದಸ್ತಗಿರಿಯಾದ ಆರೋಪಿ ಅನೀಸ್ ಬಿನ್ ನಾಸೀರ್, ವಾಸ ಬಗ್ಗಸಗೋಡು, ಬಣಕಲ್ ಅಂಚೆ, ಮೂಡಿಗೆರೆ ತಾಲ್ಲೂಕು ಎಂಬ ಇತ್ಯಾದಿ ಇದ್ದ ವರದಿಯನ್ನು ಸ್ವೀಕರಿಸಿರುತ್ತೇನೆ.

3. ಈಗಾಗಲೇ ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಸಿ ಅಂತಿಮ ವರಿದಿಯನ್ನು ಸಲ್ಲಿಸಿಕೊಳ್ಳಲಾಗಿದ್ದು, ಈ ಮೇಲ್ಕಾಣಿಸಿದ ವರದಿಯ ಆಧಾರದ ಮೇಲೆ ಸದರಿ ಪ್ರಕರಣದಲ್ಲಿ ತನಿಖೆಯನ್ನು ಮುಂದುವರೆಸಲು ಘನ ನ್ಯಾಯಾಲಯದಿಂದ ಅನುಮತಿ ಕೋರಿ ಅನುಮತಿ ಪಡೆದ ನಂತರ ದಿ.13.01.2022 ರಂದು ಈ ಪ್ರಕರಣದ 1 ನೇ ಆರೋಪಿ ಅನೀಸ್ ಈತನ ಇರುವಿಕೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ನಾನು ಸಿಬ್ಬಂದಿಯವರೊಂದಿಗೆ ಬಗ್ಗಸಗೋಡಿಗೆ ಹೊರಟು ಬಾತ್ಮೀದಾರರಿಂದ ಆರೋಪಿತನ ಮನೆಯ ವಿಳಾಸವನ್ನು ತಿಳಿದುಕೊಂಡಿದ್ದು, ಸದರಿ ಮನೆಯ ಹತ್ತಿರ ಹೋಗಿ ಆ ಮನೆಯ ಮುಂದೆ ಇಬ್ಬರು ವ್ಯಕ್ತಿಗಳು ಇದ್ದು ಅವರ ಹೆಸರು ಕೇಳಲಾಗಿ ಅನೀಸ್ ಮತ್ತು ಸಂಶುದ್ದೀನ್ ಬಿನ್ ಖಾದರ್. ಸದರಿ ಇಬ್ಬರನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರ ಮಾಡಲಾಗಿದ್ದು ಅನೀಸ್ ಮತ್ತು ಸಂಶುದ್ದೀನ್ ರವರು ಸೇರಿ ಕಳ್ಳತನ ಮಾಡಿದ್ದಾಗಿ ತಿಳಿಸಿದ್ದರಿಂದ ಇಬ್ಬರನ್ನು ಮ.1.30 ಗಂಟೆಗೆ ವಶಕ್ಕೆ ಪಡೆದು ಮ.2.00 ಗಂಟೆಗೆ ಮೂಡಿಗೆರೆ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ಮಾನ್ಯ ನ್ಯಾಯಾಲಯದ ಆದೇಶವನ್ನು ಅನುಸರಿಸಿ ದಸ್ತಗಿರಿ ಕ್ರಮ ಜರುಗಿಸಿ ಅವರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ತನಿಖೆ ಸಮಯದಲ್ಲಿ ಆರೋಪಿತರು ಕಳುವು ಮಾಡಿದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ಕಚೇರಿಗೆ ಪಂಚರಾದ ಚಾಸಾ-2 ಮತ್ತು 4 ರವರಿಗೆ ಘಟನೆಯ ಬಗ್ಗೆ ಮಾಹಿತಿ ನೀಡಿ ಪಂಚರನ್ನಾಗಿ ಸಹಕರಿಸಲು ಕೋರಿಕೊಂಡಿದ್ದು, ನೋಟೀಸ್ ಜಾರಿಗೊಳಿಸಿ, ಆರೋಪಿತರಿಗೆ ಸೂಕ್ತ

ಬೆಂಗಾವಲಿನೊಂದಿಗೆ ಪಂಚರನ್ನು ಕರೆದುಕೊಂಡು ಆರೋಪಿತರು ಕಳುವು ಮಾಡಿದ್ದಂತಹ ಮೂಡಿಗೆರೆ ತಾಲ್ಲೂಕು, ಬಿಳುಗುಳ ಗ್ರಾಮದ, ಅಗ್ರೋ ಶಾಪ್ ಆಗಿದ್ದು, ಆರೋಪಿತರು ಹಾಗೂ ಪಂಚರ ಸಮಕ್ಷಮ ಮ.3.00 ರಿಂದ 3.45 ರವರೆಗೂ ಸ್ಥಳ ಮಹಜರ್ ನ್ನು ಜರುಗಿಸಿರುತ್ತೇನೆ.

5. ನಂತರ 2 ನೇ ಆರೋಪಿ ಕಳುವು ಮಾಡಿದ್ದ ಕೆಲವು ವಸ್ತುಗಳನ್ನು ಉಪ್ಪಿನಂಗಡಿಯ ವಿನಿಲ್ ಎಂಬುವವರಿಗೆ ಇಟ್ಟುಕೊಳ್ಳಲು ಹೇಳಿದ್ದು ನೀವು ನನ್ನೊಂದಿಗೆ ಬಂದರೆ ಅವುಗಳನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ಪಂಚರಾದ ಚಾಸಾ-4 ಮತ್ತು 5 ರವರು ಇವರಿಬ್ಬರಿಗೂ ಹಾಜರಿಸಿಕೊಂಡು ಇಲಾಖಾ ವಾಹನದಲ್ಲಿ ಆರೋಪಿಗಳನ್ನು ಸೂಕ್ತ ಬದ್ರಿಕೆಯಲ್ಲಿ ಕರೆದುಕೊಂಡು ಉಪ್ಪಿನಂಗಡಿಯ, ಆರ್.ಎಸ್.ಕೆ. ಎಂಟರ್ ಪ್ರೆಸಸ್ ಅಂಗಡಿಗೆ ಹೋಗಿ ಆರೋಪಿತರು ತಾವು ಇಟ್ಟಿದ್ದ ಮಾಲನ್ನು ತೋರಿಸಿದ್ದು ಗುರುತಿಸಿದ್ದು ಒಂದು ಸ್ಟೀಲ್ ಕಂಪೆನಿಯ ಮರಕತ್ತರಿಸುವ 15 ಬಾಕ್ಸಗಳು, ಪ್ರತಿಯೊಂದರಲ್ಲೂ 1 ಚೈನ್ ಇರುತ್ತದೆ ಮತ್ತು ಎರಡನೆಯದಾಗಿ ಒರೇಗನ್ ಕಂಪೆನಿಯ ಮರಕತ್ತರಿಸುವ ಮಷಿನ್ ನ ಚೈನ್ ಇರುವ 6 ಬಾಕ್ಸ ಗಳು ಪ್ರತಿಯೊಂದರಲ್ಲೂ 1 ಚೈನ್ ಇರುತ್ತದೆ.

6. ಇವುಗಳನ್ನು ಪಂಚರ ಸಮಕ್ಷಮ ಮಹಜರ್ ಮುಖೇನ ವಶಪಡಿಸಿಕೊಂಡಿದ್ದು, ಸದರಿ ಮಹಜರ್ ನ್ನು ಸ.7.00 ರಿಂದ 7.45 ರವರೆಗೂ ಜರುಗಿಸಿರುತ್ತೇನೆ. ಆರೋಪಿತರು ಕಳುವು ಮಾಡಿದ್ದ ಮಷಿನ್ ಗಳನ್ನು 2 ನೇ ಆರೋಪಿಯ ಮನೆಯಲ್ಲಿ ಇಟ್ಟಿದ್ದು ಸ್ಥಳವನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ಮೇಲ್ಕಾಣಿಸಿದ ಪಂಚರನ್ನು ಕರೆದುಕೊಂಡು ತನಿಖೆ ಮುಂದುವರೆಸಿದ್ದು. 2 ನೇ ಆರೋಪಿಯ ಮನೆಗೆ ತೆರಳಿ ಅಲ್ಲಿ

1. ಸೂಪರ್ ಸ್ಟೀಲ್ ಕಂಪೆನಿಯ ಮರೂನ್ ಬಣ್ಣದ ಮರಕತ್ತರಿಸುವ ಮಷಿನ್, ಅದರ ಚೈನ್ ಮತ್ತು ಬಾರ್.

2. ಮಾಸಲು ಹಳದಿ ಮಣ್ಣದ ಮರಕತ್ತರಿಸುವ ಮಷಿನ್, ಅದರ ಚೈನ್ ಮತ್ತು ಬಾರ್.

3. ಸ್ಟಿಲ್ ಕಂಪೆನಿಯ ಮರಕತ್ತರಿಸುವ ಮಷಿನ್, ಅದರ ಚೈನ್ ಮತ್ತು ಬಾರ್.

4. ಒಲಿಯೋ ಮ್ಯಾಗ್ ಕಂಪನಿಯ ಕೇಸರಿ ಬಣ್ಣದ ಮರಕತ್ತರಿಸುವ ಮಷಿನ್, ಅದರ ಚೈನ್ ಮತ್ತು ಬಾರ್.

5. ಎರಡು ಮರಕತ್ತರಿಸುವ ಮಷಿನ್ ನ ಬಾರ್ ಗಳು.

6. ಎಂಟು ಮರಕತ್ತರಿಸುವ ಮಷಿನ್ ನ ಚೈನ್ ಗಳು.

7. ಫಾಲ್ಕನ್ ಮೇಜರ್ ಕಂಪೆನಿಯ ಕೇಸರಿ ಬಣ್ಣದ ಪ್ಲಾಸ್ಟಿಕ್ ಹಿಡಿ ಇರುವ ಗಿಡಕತ್ತರಿಸುವ ಸಣ್ಣ ಕತ್ತರಿಗಳು ಪಂಚರ ಸಮಕ್ಷಮ ರಾ.8.15 ರಿಂದ 9.00 ರವರೆಗೂ 2 ನೇ ಆರೋಪಿಯ ಮನೆಯಾದ ದ.ಕ. ಜಿಲ್ಲೆ, ಬೆಳ್ತಂಗಡಿ ತಾ., ಕರಾಯ ಅಂಚೆ, ಉರುವಾಲ ಗ್ರಾಮ ಮರಿಯಾಲ ಹೌಸ್ ನಲ್ಲಿರುವ ಮನೆಯಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇನೆ.

7. ನಂತರ ಆರೋಪಿತರನ್ನು ಸೂಕ್ತ ಬೆಂಗಾವಲಿನೊಂದಿಗೆ ಕಚೇರಿಗೆ ಕರೆದುಕೊಂಡು ಬಂದು ವಿನಿಲ್

ರವರ ಅಂಗಡಿಯಲ್ಲಿ ವಶಪಡಿಸಿಕೊಂಡ ಮಾಲನ್ನು PF.No.4/2022 ಕ್ಕೆ ಹಾಗೂ 2 ನೇ ಆರೋಪಿಯ ಮನೆಯಲ್ಲಿ ವಶಪಡಿಸಿಕೊಂಡ ಮಾಲನ್ನು PF.No.5/2022 ಕ್ಕೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

8. ದಿ.14.01.2022 ರಂದು ತನಿಖೆಯನ್ನು ಮುಂದುವರೆಸಿದ್ದು, ಆರೋಪಿಗಳು ಕಳುವು ಮಾಡಿದ DVR ಯ ಉಪಕರಣಗಳು ಮತ್ತು ಶೆಟರ್ ತೆಗೆದು ಬಳಸಿದ ಕಬ್ಬಿಣದ ರಾಡ್ ಗಳನ್ನು ಬಿಸಾಡಿದ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದ ಮೇರೆಗೆ ಕಚೇರಿಗೆ ಪಂಚರಾದ ಚಾಸಾ-2 ಮತ್ತು 4 ರವರನ್ನು ಠಾಣೆಗೆ ಬರಮಾಡಿಕೊಂಡು ನೋಟೀಸ್ ಜಾರಿ ಮಾಡಿ ಆರೋಪಿತರು ತೋರಿಸಿದ ಸ್ಥಳ ಮೂಡಿಗೆರೆ ತಾ., ಬೀಜುವಳ್ಳಿ ಗ್ರಾಮ, ಬೇಲೂರು ರಸ್ತೆಯಲ್ಲಿ ಇರುವ ಸುಂಡೇಕೆರೆ ಗ್ರಾಮ ಇಲ್ಲಿಗೆ ಹೋಗಿ ಸ್ಥಳದ ಭಾವಚಿತ್ರ ತೆಗೆದು ಬೆ.10.30 ರಿಂದ 11.30 ರವರೆಗೂ ಮಹಜರ್ ಕ್ರಮ ಜರುಗಿಸಿರುತ್ತೇನೆ.

9. ಆರೋಪಿಗಳು ಕಳುವು ಮಾಡಿದ್ದ DVR ಯ ಉಪಕರಣಗಳು ಮತ್ತು ಶೆಟರ್ ತೆಗೆದು ಬಳಸಿದ ಕಬ್ಬಿಣದ ರಾಡ್ ಗಳನ್ನು ಸುಂಡೇಕೆರೆ ಹಳ್ಳದಲ್ಲಿ ಆರೋಪಿಯು ಬಿಸಾಕಿದ ಸ್ಥಳ ಇದೆ ಎಂದು ತೋರಿಸಿದ ಮೇರೆಗೆ ಸಿಬ್ಬಂದಿಯವರ ಸಹಾಯದಿಂದ ಸದರಿ ವಸ್ತುಗಳನ್ನು ಹುಡುಕಾಡಲಾಗಿ ಸದರಿ ಘಟನೆ ನಡೆದ ಸುಮಾರು 2 ವರ್ಷ 11 ತಿಂಗಳು ಕಳೆದಿದ್ದು ಮಲೆನಾಡು ಪ್ರದೇಶವಾಗಿದ್ದು ಹೆಚ್ಚಿನ ಮಳೆಯಾಗಿದ್ದ ಕಾರಣ ನೀರಿನ ಹರಿವು ಹೆಚ್ಚಾಗಿ ಸ್ವಲ್ಪ ದೂರದವರೆಗೂ ಸಿಬ್ಬಂದಿಗಳ ಸಹಾಯದಿಂದ ಹುಡುಕಲಾಗಿ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ.

10. ಈ ಪ್ರಕರಣದಲ್ಲಿ ಆರೋಪಿತರಿಂದ ಉಪಯೋಗಿಸಲ್ಪಟ್ಟ KA-01-MB-0273 ಕಾರು ಮಾಲೀಕರಾದ ಅಬ್ದುಲ್ ಖಾದರ್ ಇವರನ್ನು ಠಾಣೆಗೆ ಕರೆಸಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಇತರ ಸಾಕ್ಷಿದಾರರಾದ ಚಾಸಾ-6 ರವರನ್ನು ಸಹಾ ವಿಚಾರಣೆಗೆ ಒಳಪಡಿಸಿ ಹೇಳಿಕೆಯನ್ನು ಪಡೆದಿರುತ್ತೇನೆ.

11. ನಂತರ ಆರೋಪಿತರು ಮುಂದಿನ ತನಿಖೆಗೆ ಅವಶ್ಯಕತೆಗೆ ಬೇಡವಾದ ಕಾರಣ ಸಿಬ್ಬಂದಿಯವರ ಮುಖಾಂತರ ರಿಮ್ಯಾಂಡ್ ಅರ್ಜಿಯೊಂದಿಗೆ ವೈದಕೀಯ ತಪಾಸಣೆಗೆ ಒಳಪಡಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲು ತಿಳಿಸಿದ್ದು, ಕೃತ್ಯಕ್ಕೆ ಬಳಸಿದ್ದ ವಾಹನವನ್ನು ವಶಕ್ಕೆ ಪಡೆಯಲು ಬಾಕಿ ಇರುವುದರಿಂದ 2 ನೇ ಆರೋಪಿಯನ್ನು ದಿ.14.01.2022 ರಿಂದ 16.01.2022 ರವರೆಗೂ 3 ದಿನಗಳ ಕಾಲ ಪೋಲಿಸ್ ಕಸ್ಟಡಿಗೆ ನೀಡುವಂತೆ ಕೋರಿ ಮನವಿಯನ್ನು ಸಲ್ಲಿಸಿಕೊಳ್ಳಲಾಯಿತು. ಅದರಂತೆ ನ್ಯಾಯಾಲಯದಿಂದ 1 ನೇ ಆರೋಪಿಗೆ ನ್ಯಾಯಾಂಗ ಬಂಧನಕ್ಕೆ ಹಾಗೂ 2 ನೇ ಆರೋಪಿಗೆ ಪೋಲಿಸ್ ಅಧಿರಕ್ಷೆಗೆ ನೀಡಿದ್ದು ಸೂಕ್ತ ಬೆಂಗಾವಲಿನೊಂದಿಗೆ ಠಾಣೆಯಲ್ಲಿ ಇರಿಸಿರುತ್ತೇನೆ.

12. ದಿ.15.01.2022 ರಂದು ಕೃತ್ಯಕ್ಕೆ ಬಳಸಿದ KA-01-MB-0273 ವಾಹನ ಇರುವಿಕೆಯ ಬಗ್ಗೆ ಮಾಹಿತಿ ಸಂಗ್ರಹಿಸಿದ ಸದರಿ ವಾಹನದ ಮಾಲೀಕರು ಎಂ.ಮಹಾದೇವ ಸ್ವಾಮಿ ಎಂದು ತಿಳಿಸಿದ್ದು ಅದರಂತೆ ಸದರಿ ವಾಹನವನ್ನು ರಿಪೇರಿಗಾಗಿ ಬಿಟ್ಟಿರುವುದಾಗಿ ಮಾಹಿತಿ ಬಂದಿದ್ದು ಕಾರಣ 2 ನೇ ಆರೋಪಿ ತನಿಖೆಗೆ ಸಧ್ಯಕ್ಕೆ ಅವಶ್ಯಕತೆ ಇಲ್ಲದೆ ಇದ್ದ ಕಾರಣ ಮುಂದಿನ ದಿನಗಳಲ್ಲಿ ಅವರನ್ನು ಪೋಲಿಸ್ ಕಸ್ಟಡಿಗೆ ಪಡೆಯಬೇಕಾದ್ದರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿಯ ಅಭಿರಕ್ಷೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

13. ದಿ.17.01.2022 ರಂದು 2 ನೇ ಆರೋಪಿಯನ್ನು ಘನ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡು ದಿ.17.01.2022 ರಿಂದ ದಿ.19.01.2022 ರವರೆಗೂ ಪೋಲಿಸ್ ಕಸ್ಟಡಿಗೆ ಪಡೆದುಕೊಂಡು ಠಾಣೆಯಲ್ಲಿ ಇಟ್ಟಿರುತ್ತೇನೆ.

14. ದಿ.18.01.2022 ರಂದು ಮೂಡಿಗೆರೆ PSI ರವರಿಗೆ ಜ್ಞಾಪನವನ್ನು ನೀಡಿ ಕೃತ್ಯಕ್ಕೆ ಬಳಸಿದಂತಹ KA-01-MB-0273 ವಾಹನವನ್ನು ಅಮಾನತ್ತು ಮಾಡಿಕೊಂಡು ಬರಲು PC ಕಸ್ಟಡಿಯಲ್ಲಿರುವ 2 ನೇ ಆರೋಪಿಯನ್ನು ಚಾಮರಾಜನಗರಕ್ಕೆ ಕರೆದುಕೊಂಡು ಹೋಗಿ ಬರಲು ಮತ್ತು ವರದಿಯನ್ನು ನೀಡಲು ಸೂಚಿಸಿದಂತೆ PSI ಮೂಡಿಗೆರೆ ರವರು ಇದೇದಿನ ರಾತ್ರಿ 9.55 ಗಂಟೆಗೆ ವಾಪಸ್ಸು ಬಂದು ಹಾಜರುಪಡಿಸಿದ್ದ ವರದಿಯನ್ನು ಹಾಗೂ ಇತರೆ ದಾಖಲೆಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ.

15. ದಿ.19.01.2022 ರಂದು ಸಾಕ್ಷಿದಾರರಾದ ಚಾಸಾ-10 ರವರನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ-7 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 2 ನೇ ಆರೋಪಿಯು ಪೋಲಿಸ್ ತನಿಖೆಗೆ ಅವಶ್ಯಕತೆ ಇಲ್ಲದೇ ಇದ್ದರಿಂದ ರಿಮ್ಯಾಂಡ್ ಅರ್ಜಿಯೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ.

16. ಇದೇದಿನ ಚಾಸಾ-13 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಕೋರಿ ಮನವಿ ಸಲ್ಲಿಸಿರುತ್ತೇನೆ. ಪಿರ್ಯಾದುರದಾರರನ್ನು ಬರಮಾಡಿಕೊಂಡು ವಿಚಾರಣೆ ಮಾಡಿ ಅವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಚಾಸಾ-11 ಮತ್ತು 12 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

17. ಚಾಸಾ-23 ರವರು ಮಹಜರ್ ಮತ್ತು ಅಮಾನತ್ತು ಸಮಯದಲ್ಲಿ ತೆಗೆದಿದ್ದ ಭಾವಚಿತ್ರವನ್ನು ಚಾಸಾ-23 ರವರ ಮೊಬೈಲ್ ನಲ್ಲಿ ತೆಗೆದಿದ್ದು ಸದರಿ ಭಾವಚಿತ್ರಗಳನ್ನು ಮೂಡಿಗೆರೆ ಠಾಣೆಯಲ್ಲಿರುವ ಕಂಪ್ಯೂಟರ್ ಬಗ್ಗೆ ವರದಿಯನ್ನು ಸ್ವೀಕರಿಸಿದ್ದು 65(ಬಿ) ದೃಢೀಕರಣವನ್ನು ಪಡೆದಿರುತ್ತೇನೆ.

18. ದಿ.25.01.2022 ರಂದು ಚಾಸಾ-13 ರವರಿಂದ ವರದಿಯನ್ನು ಸ್ವೀಕರಿಸಿರುತ್ತೇನೆ.

19. ದಿ.27.01.2022 ರಂದು ಕೃತ್ಯಕ್ಕೆ ಬಳಸಿದ ವಾಹನವನ್ನು ಅದರ ಮಾಲೀಕರಿಗೆ ಬಿಡುಗಡೆಗೊಳಿಸುವಂತೆ ಬಂದ ಆದೇಶವನ್ನು ಸ್ವೀಕರಿಸಿ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಮಹಜರ್ ಮುಖೇನ ಮ.3.30 ರಿಂದ 4.15 ರವರೆಗೂ ಮಹಜರ್ ಜರುಗಿಸಿ ಬಿಡುಗಡೆಗೊಳಿಸಿದ್ದೇನೆ. ಸದರಿ ಸಮಯಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ.

20. ಅದೇದಿನ ಇದುವರೆಗಿನ ತನಿಖೆಯಿಂದ ಆರೋಪಿತರ ಮೇಲೆ ಆರೋಪವು ಸಾಭೀತಾದ ಮೇರೆಗೆ ಮಾನ್ಯ ನ್ಯಾಯಾಲಯಕ್ಕೆ ಆರೊಪಿತರ ವಿರುದ್ಧ ದೋ.ಪ.ವನ್ನು ಸಲ್ಲಿಸಿಕೊಂಡಿರುತ್ತೇನೆ.

**ದಾಖಲಾತಿಗಳುಃ**

1. ನಿಪಿ-12 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

2. ನಿಪಿ-13 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-13(ಎ) ಎಂದು

ಗುರುತಿಸಲಾಯಿತು.

3. ನಿಪಿ-14 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

4. ನಿಪಿ-15 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

5. ದಿ.13.01.2022 ರ ನಿಪಿ-23 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-23(ಡಿ) ಎಂದು ಗುರುತಿಸಲಾಯಿತು.

6. ದಿ.13.01.2022 ರ ನಿಪಿ-26 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-26(ಸಿ) ಎಂದು ಗುರುತಿಸಲಾಯಿತು ಹಾಗೂ ನಿಪಿ-27 ಮತ್ತು 28 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

7. ದಿ.14.01.2022 ರ ನಿಪಿ-29 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-29(ಸಿ) ಎಂದು ಗುರುತಿಸಲಾಯಿತು.

8. ನಿಪಿ-30 ರಿಂದ 33 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

9. ದಿ.14.01.2022 ರ ನಿಪಿ-34 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-34(ಸಿ) ಎಂದು ಗುರುತಿಸಲಾಯಿತು. ನಿಪಿ-35 ಮತ್ತು 36 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

10. ದಿ.27.01.2022 ರ ನಿಪಿ-40 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-40(ಬಿ) ಎಂದು ಗುರುತಿಸಲಾಯಿತು.

11. ದಿ.19.01.2022 ರ ನಿಪಿ-41 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-41(ಬಿ) ಎಂದು ಗುರುತಿಸಲಾಯಿತು.

12. ದಿ.12.01.2022 ರಲ್ಲಿ ಬೆರಳು ಮುದ್ರಾ ಘಟಕದ ವರದಿಯನು ನೋಡಿ ಗುರುತಿಸಿದ್ದು, ಅದನ್ನು ನಿಪಿ-42, ಸಾಕ್ಷಿಯ ಸಹಿಯನ್ನು ನಿಪಿ-42(ಎ) ಎಂದು ಗುರುತಿಸಲಾಯಿತು.

13. ದಿ.19.01.2022 ರಂದು ಚಾಸಾ-13 ರವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-43, ಸಾಕ್ಷಿಯ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು.

14. ದಿ.25.01.2022 ರಂದು ಚಾಸಾ-13 ರವರು ನೀಡಿದ ದಾಖಲಾತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-44, ಸಾಕ್ಷಿಯ ಸಹಿಯನ್ನು ನಿಪಿ-44(ಎ), ಬೇಡಿಕೆ ಪುಸ್ತಕವನ್ನು ನಿಪಿ-45 ಎಂದು ಗುರುತಿಸಲಾಯಿತು.

15. ದಿ.27.01.2022 ರಂದು ವಾಹನದ ಬಿಡುಗಡೆಯ ಮಹಜರ್ ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-46, ಸಾಕ್ಷಿಯ ಸಹಿಯನು ನಿಪಿ-46(ಎ) ಎಂದು ಗುರುತಿಸಲಾಯಿತು. ನಿಪಿ-47 ರಿಂದ 50 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ವಾಹನ ಬಿಡುಗಡೆಯ ಕಾಲದಲ್ಲಿ ನೀಡಿದ ಇಂಡೆಮಿನಿಟಿ ಬಾಂಡ್ ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಕೆ.ಡಿ. ವಕೀಲರಿಂದಃ**

1. ನಿಮಗೆ ಯಾವುದೇ ಬೆರಳು ಮುದ್ರ ಘಟಕದಿಂದ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ.

2. ನೀವು 1 ಮತ್ತು 2 ನೇ ಆರೋಪಿತರನ್ನು ಬಂದಿಸಿಲ್ಲ. ಆರೋಪಿತರು ನಿಮ್ಮ ಮುಂದೆ ಯಾವುದೇ ಸ್ವ

ಇಚ್ಛಾ ಹೇಳಿಕೆ ದಾಖಲಿಸಿಕೊಂಡಿಲ್ಲ.

3. ನೀವು ಸಾಕ್ಷಿದಾರರ ಸಮಕ್ಷಮ ಯಾವುದೇ ಸ್ಥಳ ಮಹಜರ್ ಗಳನ್ನು ಮಾಡಿಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ನಿಪಿ-12 ರಿಂದ 15 ರ ಸುಳ್ಳು ಪ್ರಮಾಣಪತ್ರಗಳನ್ನು ಪಡೆದದ್ದೀರ ಎಂದರೆ ಸರಿಯಲ್ಲ.

4. ನೀವು ಯಾವುದೇ ಅಮಾನತ್ತು ಮಹಜರ್ ಗಳನ್ನು ಮಾಡಿಲ್ಲ.

5. ನೀವು ಯಾವುದೇ ವಾಹನವನ್ನು ಆರೋಪಿತರ ಕಡೆಯಿಂದ ಸಾಕ್ಷಿದಾರರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

6. ನೀವು ಚಾಸಾ-13 ರವರಿಂದ ಯಾವುದೇ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

7. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಭೀತಾಗದೇ ಇದ್ದರೂ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.